<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಗ್ರಾಅಪ.2.ಪಘಯೋ. 11

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,ಸಚಿವಾಲಯ-2,
ಬೆಂಗಳೂರು,ದಿನಾಂಕ.20-07-2012

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,**
**ಜಿಲ್ಲಾ ಪಂಚಾಯತ್,**
**<u>ಬೆಳಗಾಂ/ಚಿಕ್ಕಮಗಳೂರು/ಚಾಮರಾಜನಗರ/</u>**
**<u>ದಕ್ಷಿಣ ಕನ್ನಡ/ಧಾರವಾಡ/ಹಾಸನ/ಕೊಡಗು/</u>**
**<u>ಮೈಸೂರು/ಶಿವಮೊಗ್ಗ/ಉಡುಪಿ ಮತ್ತು ಉತ್ತರ ಕನ್ನಡ</u>**

**ಮಾನ್ಯರೇ,**

ವಿಷಯ:- ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮದ 2012-13ನೇ ಸಾಲಿನ ರಾಜ್ಯದ ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:- ಕೇಂದ್ರ ಸರ್ಕಾರದ ಯೋಜನಾ ಆಯೋಗದ ಪತ್ರ ಸಂ. PC(P) 19/125/KAR/ 2012-13 WGS ದಿ:5-7-2012.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಯೋಜನಾ ಆಯೋಗವು ಉಲ್ಲೇಖಿತ ಪತ್ರದಲ್ಲಿ ರಾಜ್ಯದ 2012-13ನೇ ಸಾಲಿನ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮದ ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುತ್ತದೆ. ಪತ್ರದ ಪ್ರತಿ ಲಗತ್ತಿಸಲಾಗಿದೆ. ಸದರಿ ಪತ್ರದಲ್ಲಿ ಅನುಮೋದಿಸಿರುವಂತೆ ಅನುಮೋದಿತ ಕ್ರಿಯಾಯೋಜನೆಯನ್ವಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಯೋಜನಾ ಆಯೋಗದ ಪತ್ರದಲ್ಲಿ ಸೂಚಿಸಿರುವಂತೆ, 2011-12ನೇ ಸಾಲಿನಲ್ಲಿ ನಿಮ್ಮ ನಿಮ್ಮ ಜಿಲ್ಲೆಗಳಲ್ಲಿ ಸದರಿ ಯೋಜನೆಯಡಿ ಖರ್ಚಾಗದೇ ಬಾಕಿ ಉಳಿದಿರುವ ಅನುದಾನವನ್ನು ಸೆಪ್ಟೆಂಬರ್ 2012 ರೊಳಗಾಗಿ ಪೂರ್ಣವಾಗಿ ಖರ್ಚು ಮಾಡಿ ದಿನಾಂಕ:10-10-2012ರೊಳಗಾಗಿ 2011-12ನೇ ಸಾಲಿನ ಬಾಕಿ ಉಳಿದ ಮೊತ್ತದ ಭೌತಿಕ ಹಾಗೂ ಆರ್ಥಿಕ ಪ್ರಗತಿ ವರದಿಯನ್ನು ತಪ್ಪದೇ ಸರ್ಕಾರಕ್ಕೆ ಸಲ್ಲಿಸುವುದು. ತಪ್ಪಿದಲ್ಲಿ ತಮ್ಮ ಜಿಲ್ಲೆಗೆ

2012-13ನೇ ಸಾಲಿನ ಎರಡನೇ ಕಂತಿನ ಅನುದಾನದ ಬಿಡುಗಡೆ ಮೊತ್ತದಲ್ಲಿ ಕಡಿತಗೊಳಿಸಲಾಗುವುದು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ. ಹಾಗೂ 2011-12ನೇ ಸಾಲಿನಲ್ಲಿ ಬಾಕಿ ಉಳಿದ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ಸಂಪೂರ್ಣವಾಗಿ ಖರ್ಚು ಮಾಡುವುದು ಮತ್ತು ಪ್ರತಿ ಮಾಹೆ ಖರ್ಚಾದ ವಿವರದ ಪ್ರಗತಿ ವರದಿಯನ್ನು ತಪ್ಪದೇ ಸಲ್ಲಿಸುವುದು.

ತಮ್ಮ ವಿಶ್ವಾಸಿ,

ಸಹಿ:
(ಎಂ.ದೀಪಾ)
ನಿರ್ದೇಶಕರು(ಗ್ರಾಮೂಸೌ-II)
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

<u>ಪ್ರತಿಯನ್ನು :</u>

**ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಬೆಳಗಾಂ/ಚಿಕ್ಕಮಗಳೂರು/ಚಾಮರಾಜನಗರ/ ದಕ್ಷಿಣ ಕನ್ನಡ/ಧಾರವಾಡ/ಹಾಸನ/ಕೊಡಗು/ಮೈಸೂರು/ಶಿವಮೊಗ್ಗ/ಉಡುಪಿ ಮತ್ತು ಉತ್ತರ ಕನ್ನಡ** ರವರಿಗೆ ಮಾಹಿತಿಗಾಗಿ.